ಅಸಲು ದಾವಾ 35/2015 ಪಿ ಡಬ್ಲ್ಯೂ 1 ಃ ನಾಗರಾಜು

ದಿನಾಂಕಃ 05.08.2021 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.

<u>ಪ್ರತಿವಾದಿ ನಂಬರ್ 2 ರಿಂದ 15 ನೇದ್ದವರ ಪರ ವಕೀಲರಾದ ಶ್ರೀಯುತ ಬಿ ಎನ್ ಜಿ ರವರಿಂದ ಸಾಕ್ಷಿಯ ಮುಂದುವರಿದ ಪಾಟೀ ಸವಾಲು ಃ</u>

9. ನಾನು ಪಿ ಯು ಸಿ ತನಕ ಶಿಕ್ಷಣ ಪೂರೈಸಿರುತ್ತೇನೆ. 2 ನೇ ವಾದಿ ಮತ್ತು 3 ನೇ ವಾದಿ ಅಲ್ಲದೇ ನನ್ನ ವಿದ್ಯಾಭ್ಯಾಸವನ್ನು ನಮ್ಮ ತಂದೆಯಾದ ಪ್ರತಿವಾದಿ ನಂಬರ್ 1 ನೋಡಿಕೊಂಡಿರುತ್ತಾರೆ ಅನ್ನವುದು ಸರಿ. ನಮ್ಮ ತಂದೆಗೆ ವಯಸ್ಸಾಗಿದ್ದು , ಈಗ ಓಡಾಡುವುದು ಸ್ವಲ್ಪ ಕಷ್ಟ ಆಗಿದೆ ಅನ್ನುವುದು ಸರಿ. ನಮ್ಮ ತಂದೆಯನ್ನು ನಾನಾಗಲೀ ನನ್ನ ಸಹೋದರನಾಗಲೀ ಪೋಷಣೆ ಮಾಡುತ್ತಿಲ್ಲ.

10. ನಮ್ಮ ತಂದೆಗೆ ಮೈಸೂರಿನ ಮೇಟಗಹಳ್ಳಿ ಯಲ್ಲಿ ಒಂದು ಮನೆ ಇತ್ತು ಅಂದರೆ ಸರಿಯಲ್ಲ. ಸದರಿ ಮನೆಯನ್ನು ನಮ್ಮ ತಂದೆಯೇ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ. ಮಾಕನಕೊಪ್ಪಲುನಲ್ಲಿದ್ದ ಸರ್ವೆ ನಂಬರ್ 6 ರಲ್ಲಿ 00-13 ಗುಂಟೆ ಜಮೀನನ್ನು ನಮ್ಮ ತಂದೆ ಒಬ್ಬ ನಂಜೇಗೌಡ ಅನ್ನುವವರಿಗೆ ಮಾರಾಟ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ ಅಂತ ಹೇಳುತ್ತೇನೆ. ಸರ್ವೆ ನಂಬರ್ 44 ರಲ್ಲಿ 00-05 ಗುಂಟೆ ನಿವೇಶನ ನನ್ನ ತಂದೆ ಹೆಸರಿನಲ್ಲಿ ಇದೆ ಅಂದರೆ ಸರಿ. ಅಚ್ಚಪ್ಪನ ಕೊಪ್ಪಲು ಗ್ರಾಮದ ಸರ್ವೆ ನಂಬರ್ 44 ರಲ್ಲಿ ಒಂದು ಆರ್ ಸಿ ಸಿ ಮನೆ ನಮ್ಮ ತಂದೆಯ ಹೆಸರಿನಲ್ಲಿದೆ ಅಂದರೆ ಸರಿ. ಈ ಮೇಲಿನ ಎರಡೂ

ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಅನ್ನುವುದು ಸರಿ. ಈಗ ನನಗೆ ತೋರಿಸುತ್ತಿರುವ ದೃಢೀಕೃತ ನಕಲಿನ ಪಹಣಿ ಪತ್ರಿಕೆಯನ್ನು ನೋಡಿದೆನು. ( ಪ್ರತಿವಾದಿ ಪರ ವಕೀಲರು ಸರ್ವೆ ನಂಬರ್ 89/ಬಿ ಇದರ ಪಹಣಿ ಪತ್ರಿಕೆಯನ್ನು ಸಾಕ್ಷಿಗೆ ತೋರಿಸಿ ಪ್ರಶ್ನೆ ಕೇಳಿರುತ್ತಾರೆ.) ಸದರಿ ಸರ್ವೆ ನಂಬರ್ 89/ಬಿ ನನ್ನ ತಂದೆಯ ಹೆಸರಿನಲ್ಲಿ ಇರುತ್ತದ ಅನ್ನುವುದು ಸರಿ. **(ದೃಢೀಕೃತ ನಕಲಿನ ಸರ್ವೆ ನಂಬರ್ 89/ಬಿ ಈ ಪಹಣಿ ಪತ್ರಿಕೆಯನ್ನು ವಾದಿಯರು ಈಗಾಗಲೀ ದಾಖಲಿಸಿದ್ದು ಅದನ್ನು ನಿಪಿಃ 17 ಅಂತ ಗುರುತಿಸಲಾಗಿದೆ)** ಸರ್ವೆ ನಂಬರ್ 89 ಇದು ಎರಡು ಭಾಗಗಳಾಗಿರುತ್ತದೆ . ಅದರ ಕ್ಷೇತ್ರ ಒಟ್ಟು 00-72 ಗುಂಟೆ ಇರುತ್ತದೆ. ಸರ್ವೆ ನಂಬರ್ 89/ಎ 00-36 ಗುಂಟೆ ಮತ್ತು ಸರ್ವೆ ನಂಬರ್ 89/ಬಿ 00-36 ಗುಂಟೆ ಅಂತ ಹೀಗೆ ಎರಡು ಪಹಣಿ ಪತ್ರಿಕೆಗಳು ಇರುತ್ತವೆ. ಸದರಿ ಎರಡೂ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತವೆ ಅನ್ನುವುದು ಸರಿ. ಎರಡೂ ಆಸ್ತಿಗಳನ್ನು ಈ ದಾವೆಯಲ್ಲಿ ನಾವು ಸೇರ್ಪಡೆ ಮಾಡಿಲ್ಲ ಅನ್ನುವುದು ಸರಿಯಲ್ಲ. (ಸರ್ವೆ ನಂಬರ್ 89/ಎ 00-36 ಗುಂಟೆ ಈ ಜಮೀನನ್ನು ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇವೆ ಅಂತ ಸಾಕ್ಷಿ ಸ್ವತಃ ಹೇಳುತ್ತಾರೆ.) ಸರ್ವೆ ನಂಬರ್ 89/ಬಿ ಈ ಪಹಣಿ ಪತ್ರಿಕೆಯನ್ನು ನಾವು ಹಾಜರು ಪಡಿಸಿಲ್ಲ ಅನ್ನುವುದು ಸರಿ.

11. ನಮ್ಮ ತಂದೆಯ ಹೆಸರಿನಲ್ಲಿರುವ ಆಸ್ತಿಗಳಲ್ಲಿ ಅವರೇ ಸ್ವಾಧೀನದಲ್ಲಿದ್ದು, ಕಂದಾಯವನ್ನು ಸಹಿತ ಅವರೇ ಪಾವತಿ ಮಾಡುತ್ತಿರುತ್ತಾರೆ. ನಾನು ಈಗ ನೋಡುತ್ತಿರುವ ನಿಪಿಃ 18 ಪಹಣಿ ಪತ್ರಿಕೆಯಲ್ಲಿ ಕಾಣುವಂತಹ ಸರ್ವೆ ನಂಬರ್ 9/8 ಎ (ಐಟಂ ನಂಬರ್ 4) ಇರುತ್ತದೆ. ಸದರಿ ಪಹಣಿ ಪತ್ರಿಕೆಯಲ್ಲಿ ಈ ದಾವೆಯ

ಪ್ರತಿವಾದಿ 15 ರವರಾದ ಶ್ರೀ ರಮೇಶ್ ಅನ್ನುವವರ ಹೆಸರು ದಾಖಲಿದೆ ಅನ್ನುವುದು ಸರಿ . ನಾನು ಈಗ ನೋಡುತ್ತಿರುವ ನಿಪಿಃ 19 ಪಹಣಿ ಪತ್ರಿಕೆಯಲ್ಲಿ ಕಾಣುವಂತಹ ಮನೆಗೆ ಸಂಬಂದಿಸಿದ ದಾವಾ ಆಸ್ತಿ ಐಟಂ ನಂಬರ್ 5 ಇರುತ್ತದೆ ಅನ್ನುವುದ ಸರಿ. ಸದರಿದಾಖಲಾತಿಯಲ್ಲಿ ಪ್ರತಿವಾದಿ 5 ರವರಾದ ಶ್ರೀ ನಿಜಗುಣ ಅನ್ನುವವರ ಹೆಸರು ದಾಖಲಿದೆ ಅನ್ನುವುದು ಸರಿ. ದಾವಾ ಆಸ್ತಿ ಐಟಂ ನಂಬರ್ 4 ಮತ್ತು 5 ಆಸ್ತಿಗಳು ಈ ದಾವೆಯ ದಾಖಲು ಮಾಡುವ ಸಮಯಕ್ಕೆ ನಮ್ಮ ತಂದೆಯವರ ಹೆಸರಿನಲ್ಲಿ ಇದ್ದವು ಅಂತ ಹೇಳಲು ದಾಖಲಾತಿಗಳನ್ನು ಹಾಜರು ಮಾಡಿದ್ದೇವೆ.

12. ನನಗೂ ಮತ್ತು ನನ್ನ ತಂದೆಗೂ ದ್ವೇಷ ಇಲ್ಲ ಅನ್ನುವುದು ಸರಿ. (ದಾವೆ ಹಾಕುವ ಪೂರ್ವದಲ್ಲಿ ತಾವು ಸ್ನೇಹ ಪೂರ್ವಕವಾಗಿ ಇದ್ದೆವು ಮತ್ತು ದಾವಾ ನಂತರ ತಮ್ಮಲ್ಲಿ ದ್ವೇಷ ಹುಟ್ಟಿದೆ ಅಂತ ಸಾಕ್ಷಿ ಹೇಳುತ್ತಾರೆ) ದಾವಾ ಐಟಂ ನಂಬರ್ 4 ಇದರ ಸರ್ವೆ ನಂಬರ್ 9/8 ಇದರ ಕ್ಷೇತ್ರ 1 ಎಕರೆ 22 ಗುಂಟೆ ಜಮೀನನ್ನು ನಮ್ಮ ತಂದೆಯು ಕುಟುಂಬದ ಆರ್ಥಿಕ ಅಡಚಣೆ ಸಲುವಾಗಿ ದಿಃ 17.04.1973 ರಂದು ನೊಂದಣಿ ಕ್ರಯ ಪತ್ರದ ಮೂಲಕ ಪ್ರತಿವಾದಿ ನಂಬರ್ 5 ನೇದ್ದವರ ತಾತ ಆದ ನಿಂಗೇಗೌಡ ಅನ್ನುವವರಿಗೆ ಮಾರಾಟ ಮಾಡಿರುತ್ತಾರೆ ಅನ್ನುವುದು ಸುಳ್ಳು. ಸದರಿ ಕ್ರಯ ಪತ್ರದ ಆಧಾರದ ಮೇಲೆ ನಿಂಗೇಗೌಡರ ಹೆಸರು ಖಾತೆಯಲ್ಲಿ ನಮೂದಾಗಿ ಪಹಣಿ ಪತ್ರಿಕೆಗೆ ಸಹಿತ ದಾಖಲಾಗಿರುತ್ತದೆ ಅಂತ ಸೂಚಿಸಿದಲ್ಲಿ ನನಗೆ ಗೊತ್ತಿಲ್ಲ ಅಂತ ಹೇಳುತ್ತೇನೆ. ಪ್ರತಿವಾದಿ ನಂಬರ್ 2

ರಿಂದ 15 ದ್ದವರ ಕುಟುಂಬದಲ್ಲಿ ಆದಂತಹ ದಿಃ 21.071975 ರ ವ್ಯವಸ್ಥಾ ಪತ್ರದ ಪ್ರಕಾರ ಹಾಗೂ ದಿಃ 04.12.2010 ರ ನೊಂದಣಿ ವಿಭಾಗ ಪತ್ರದ ಆಧಾರ ಮೇಲೆ ಐಟಂ ನಂಬರ್ 4 ಈ ಆಸ್ತಿ ಪ್ರತಿವಾದಿ ನಂಬರ್ 5 ನೇದ್ದವರ ಪಾಲಿಗೆ ಬಂದಿರುತ್ತದೆ ಅಂತ ಸೂಚಿಸಿದಲ್ಲಿ ನನಗೆ ಗೊತ್ತಿಲ್ಲ ಅಂತ ಹೇಳುತ್ತೇನೆ. ಸದರಿ ನೊಂದಣಿ ವಿಭಾಗ ಪತ್ರದ ಆಧಾರದ ಮೇಲೆ ಪ್ರತಿವಾದಿ ನಂಬರ್ 5 ನೇದ್ದವರ ಹೆಸರು ದಾಖಲಾಗಲು ಎಂ ಆರ್ ನಂಬರ್ 24/2010-11 ದೃಢೀಕರಣವಾಗಿರುತ್ತದೆ ಅನ್ನುವುದು ಸುಳ್ಳು. ಐಟಂ ನಂಬರ್ 4 ಆಸ್ತಿಯನ್ನು ನಮ್ಮ ತಂದೆ ನಿಂಗೇಗೌಡ ಇವರಿಗೆ ಮಾರಾಟ ಮಾಡಿದ್ದರಿಂದ ಮತ್ತು ತರುವಾಯ ಸದರಿ ಆಸ್ತಿ ವಿಭಾಗ ಪತ್ರದ ಆಧಾರದ ಮೇಲೆ ಪ್ರತಿವಾದಿ ನಂಬರ್ 5 ನೇದ್ದವರ ಪಾಲಿಗೆ ಹೋಗಿದ್ದರಿಂದ ಈ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ.

13. ಐಟಂ ನಂಬರ್ 5 ದಾವಾ ಮನೆಯನ್ನು ನಮ್ಮ ತಂದೆಯು ಪ್ರತಿವಾದಿ ನಂಬರ್ 5 ನೇದ್ದವರ ತಾತನಿಗೆ ದಿಃ 27.02.1973 ರ ನೊಂದಣಿ ಕ್ರಯ ಪತ್ರದ ಆಧಾರದಮೇಲೆ ಮಾರಾಟ ಮಾಡಿದ್ದಾರೆ ಅನ್ನುವುದು ಸರಿಯಲ್ಲ. ಐಟಂ ನಂಬರ್ 5 ದಾವಾ ಮನೆಯನ್ನು ನಮ್ಮ ತಂದೆಯು ಪ್ರತಿವಾದಿ ನಂಬರ್ 5 ನೇದ್ದವರ ತಾತನಿಗೆ ದಿಃ 27.02.1973 ರ ನೊಂದಣಿ ಕ್ರಯ ಪತ್ರದ ಆಧಾರದಮೇಲೆ ಮಾರಾಟ ಮಾಡಿದ್ದರಿಂದ ಆ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ. ಐಟಂ ನಂಬರ್ 4

ಮತ್ತು 5 ಈ ಎರಡೂ ಆಸ್ತಿಗಳನ್ನು ನಮ್ಮ ತಂದೆ ಮಾರಾಟ ಮಾಡಿರುವುದು ಗೊತ್ತಿದ್ದರೂ ಸಹಿತ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

13. ಅಚ್ಚಪ್ಪನ ಕೊಪ್ಪಲು ಗ್ರಾಮದಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಆರ್ ಸಿ ಸಿ ಮನೆ ಮತ್ತು ಹೆಂಚಿನ ಮನೆ ( ಎರಡೂ ಸೇರಿ ಒಂದೇ ಮನೆ) ಇರುತ್ತದೆ. ಸದರಿ ಮನೆಗೆ ಸಂಬಂದಿಸಿದ ದಾಖಲಾತಿಯನ್ನು ಈ ದಾವೆಯಲ್ಲಿ ಹಾಜರು ಮಾಡಿಲ್ಲ ಅನ್ನುವುದು ಸರಿ. ಸದರಿ ಮನೆಯನ್ನು ಸಹಿತ ಈ ದಾವೆಯಲ್ಲಿ ಸೇರಿಸಿಲ್ಲ ಅನ್ನುವುದು ಸರಿ. ಐಟಂ ನಂಬರ್ 4 ಮತ್ತು 5 ಈ ಆಸ್ತಿಗಳಲ್ಲಿ ನಮಗಾಗಲೀ ಅಥವಾ ನಮ್ಮ ತಂದೆ ಪ್ರತಿವಾದಿ ನಂಬರ್ 1 ಇವರಿಗಾಗಲೀ ಯಾವುದೇ ಹಕ್ಕು ಇರದೇ ಹೋದರೂ ಸಹಿತ ಮತ್ತು ಅವೆರಡೂ ಆಸ್ತಿಗಳು ಪ್ರತಿವಾದಿ ನಂಬರ್ 5 ನೇದ್ದವರ ಆಸ್ತಿ ಅಂತ ಗೊತ್ತಿದ್ದರೂ ಸಹಿತ, ಪ್ರತಿವಾದಿ ನಂಬರ್ 5 ನೇದ್ದವರಿಗೆ ಕೇವಲ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಅವೆರಡೂ ಆಸ್ತಿಗಳನ್ನು ದಾವೆಯಲ್ಲಿ ಶಾಮೀಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಎರಡೂ ಆಸ್ತಿಗೆ ಸಂಬಂದಿಸಿದಂತೆ ವ್ಯವಹಾರ ಸುಮಾರು 30 ವರ್ಷಗಳ ಹಿಂದೆ ಆಗಿರುವುದರಿಂದ ಸದರಿ ವ್ಯವಹಾರವನ್ನು ಪ್ರಶ್ನೆ ಮಾಡುವ ಯಾವುದೇ ಹಕ್ಕು ನಮಗೆ ಯಾವತ್ತೂ ಉದ್ಭವಿಸಿಲ್ಲ ಅನ್ನುವುದು ಸರಿಯಲ್ಲ.

14. ನಮ್ಮ ತಂದೆ ಹೆಸರಿನಲ್ಲಿರುವ ಇನ್ನೂ ಕೆಲವೊಂದು ಆಸ್ತಿಗಳನ್ನು ಸೇರಿಸದೇ

ಇದ್ದರೂ ಸಹಿತ ದಾವೆ ಊರ್ಜಿತವಾಗುವುದಿಲ್ಲ ಅನ್ನುವುದು ಸರಿಯಲ್ಲ ಮತ್ತು ಆ ಕಾರಣಕ್ಕೆ ದಾವಾ ವಜಾ ಆಗಲು ಯೋಗ್ಯವಿರುತ್ತದೆ ಅನ್ನುವುದು ಸರಿಯಲ್ಲ. ಐಟಂ ನಂಬರ್ 4 ಮತ್ತು 5 ಈ ಆಸ್ತಿಗಳಿಗೆ ಸಂಬಂದಿಸಿದಂತೆ ದಾವೆಯು ಪ್ರತಿವಾದಿ ನಂಬರ್ 2 ರಿಂದ 15 ದ್ದವರ ವಿರುದ್ದ ಊರ್ಜಿತವಾಗುವುದಿಲ್ಲ ಅನ್ನುವುದು ಸರಿಯಲ್ಲ.

ಮರು ಪಾಟೀ ಸವಾಲು ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ